**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು**

ಓಎಸ್ 181/2020 ಪಿಡಬ್ಲ್ಯೂ-3

ದಿನಾಂಕಃ-24 -07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ-ವಾದಿಯ ಪರ ಮಾನ್ಯ ಶ್ರೀ.ಎಂಕೆ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು, ಪ್ರಮಾಣ ಪತ್ರಿಕೆಯಲ್ಲಿ ಬರೆಸಿರುವ ವಿಷಯಗಳೆಲ್ಲವೂ ಸತ್ಯವಾಗಿದೆ. ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿದ್ದೇನೆ.

ದಿ 21-08-2018 ರಂದು ಆಗಿರುವ ನೊಂದಾಯಿತ ಕ್ರಯದ ಕರಾರು ಪತ್ರಕ್ಕೆ ಮೋಹನ್ ರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ, ಸದರಿ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ, ಅದನ್ನು ಈಗಾಗಲೇ ನಿಪಿ-1 ಡಿ ಎಂದು ಗುರುತಿಸಲಾಗಿದೆ. ಸದರಿ ಕ್ರಯದ ಕರಾರು ಪತ್ರದಲ್ಲಿ ಪ್ರತಿವಾದಿಗಳು ಸಹಿ ಮಾಡಿದ್ದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-1 ಎ ರಿಂದ ನಿಪಿ-1 ಸಿ ಎಂದು ಗುರುತಿಸಲಾಗಿದೆ. ಮತ್ತೊಬ್ಬ ಸಾಕ್ಷಿದಾರರಾದ ರವಿ ರವರು ಸಹಿ ಮಾಡಿದ್ದು, ಸಾಕ್ಷಿ ಅವರ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಇ ಎಂದು ಗುರುತಿಸಲಾಗಿದೆ. ಸದರಿ ಪತ್ರವನ್ನು ನಾನೇ ಬರೆದಿರುತ್ತೇನೆ, ಸಾಕ್ಷಿಯು ತನ್ನ ಸಹಿ ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ-1 ಎಫ್ ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಪ್ರತಿವಾದಿಯ ಪರ ವಕೀಲರು ಲಿಖಿತ ಹೇಳಿಕೆಯನ್ನು ಸಲ್ಲಿಸದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಎರಡನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ